ಈ) ತುಂಗಾ ಏತ ನೀರಾವರಿ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ತುಂಗಾ ಮೇಲ್ದಂಡೆ ಯೋಜನೆ ಸಲುವಾಗಿ ಈವರೆಗೆ ಅವಾರ್ಡ್ ಅನುಮೋದನೆಯಾದ 34 ಗ್ರಾಮಗಳ ಬಾಬ್ತು 441 ಸರ್ವೆ ನಂಬರುಗಳ ಭೂಮಾಲೀಕರುಗಳಿಗೆ ಪರಿಹಾರ ಮೊತ್ತ ಪಾವತಿಸಲಾಗಿದೆ. ಇನ್‌ಡೆಮ್‌ನಿಟಿ ಬಾಂಡ್ ಹಾಗೂ ಹಕ್ಕಿನ ದಾಖಲೆಗಳನ್ನು ಸಲ್ಲಿಸಲು ವಿಳಂಬ ಮಾಡುತ್ತಿರುವಂತಹವರ ಒಟ್ಟು 50 ಸರ್ವೆ ನಂಬರುಗಳ ಭೂಮಾಲೀಕರುಗಳಿಂದ ದಾಖಲೆಗಳನ್ನು ಪಡೆದ ನಂತರ ಪರಿಹಾರ ಮೊತ್ತವನ್ನು ಪಾವತಿಸಬೇಕಾಗಿದೆ.

ಆ) ತುಂಗಾ ಮೇಲ್ದಂಡೆ ಯೋಜನೆ ಅಣೆಕಟ್ಟು ಕಾಮಗಾರಿಯು ಶೇಕಡ 48 ರಷ್ಟು ಪೂರ್ಣಗೊಂಡಿದೆ.

ತುಂಗಾ ಮೇಲ್ದಂಡೆ ಯೋಜನೆಯ ಅಂದಾಜು ಮೊತ್ತವಾದ ರೂ. 915.35 ಕೋಟಿಯಾಗಿದ್ದು ಅಣೆಕಟ್ಟು ಕಾಮಗಾರಿಯ ಅಂದಾಜು ಮೊತ್ತ ರೂ. 74.40 ಕೋಟಿ ಇದೆ. ಜೂನ್ 2002ರ ಅಂತ್ಯದವರೆಗೆ ರೂ. 28.089 ಕೋಟಿ ಖರ್ಚಾಗಿರುತ್ತದೆ. ಅಣೆಕಟ್ಟು ಕಾಮಗಾರಿಯನ್ನು ಜೂನ್ 2003ರೊಳಗೆ ಪೂರ್ಣಗೊಳಿಸಲು ಯೋಚಿಸಿದೆ. ತುಂಗಾ ಮೇಲ್ದಂಡೆ ಯೋಜನೆಗೆ ಜೂನ್ 2002ರ ಅಂತ್ಯದವರೆಗೆ ರೂ. 194.87 ಕೋಟಿ ಖರ್ಚಾಗಿದ್ದು ಯೋಜನೆಯನ್ನು 2004ರ ಅಂತ್ಯದೊಳಗೆ ಪೂರ್ಣಗೊಳಿಸಲು ಯೋಚಿಸಿದೆ.

ಇ) ತುಂಗಾ ಮೇಲ್ದಂಡೆ ಯೋಜನೆ ಅಡಿ ನೀರಾವರಿ ಸಲುವಾಗಿ 449.55 ಹೆ. ಅರಣ್ಯ ಪ್ರದೇಶವನ್ನು ಬಿಡುಗಡೆಗೊಳಿಸಲು ಕೋರಲಾಗಿದ್ದು, ಕೇಂದ್ರ ಪರಿಸರ ಇಲಾಖೆಯಿಂದ ಅನುಮತಿ ಪಡೆಯುವ ಸಲುವಾಗಿ ಕೇಂದ್ರ ಸರ್ಕಾರದ ಜೊತೆ ವ್ಯವಹರಿಸಲಾಗುತ್ತಿದೆ.

ನಾಲಾ ಸರಪಳಿ 170 ಮೀ.ನಿಂದ 1950 ಮೀ.ವರೆಗೆ ಅರಣ್ಯ ಪ್ರದೇಶ ಬಿಡುಗಡೆಯಾಗದ ಕಾರಣದಿಂದಾಗಿ ನಾಲಾ ನಿರ್ಮಾಣ ಪ್ರಾರಂಭಗೊಂಡಿರುವ ಕಾಮಗಾರಿ ಮತ್ತು ಪಂಕ್ತಿ ಬದಲೀಕರಣ ಪ್ರಸ್ತಾವನೆ ಇರುವ ಕಿ.ಮೀ.60ರ ಕಾಮಗಾರಿ ಹೊರತಾಗಿ ಉಳಿದಂತೆ ಎಲ್ಲ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಈ) ತುಂಗಾ ಏತ ನೀರಾವರಿ ಯೋಜನಾ ವರದಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಒದಗಿಸಲಾಗಿದ್ದು, ಪ್ರಸಕ್ತ ಸಾಲಿಗೆ ರೂ. 5.00 ಕೋಟಿ ವಾರ್ಷಿಕ ಕಾಮಗಾರಿಗಳ ಕಾರ್ಯಕ್ರಮವಿದ್ದು ಈ ಯೋಜನೆಗೆ ಅರಣ್ಯ ಪ್ರದೇಶವನ್ನು ನೀರಾವರಿ ಕಾರ್ಯಗಳಿಗಾಗಿ ಬಿಡುಗಡೆಗೊಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಅರಣ್ಯ ಪ್ರದೇಶ ಬಿಡುಗಡೆಯಾದ ನಂತರ ಯೋಜನಾ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ತುಂಗಾ ಮೇಲ್ದಂಡೆ ಯೋಜನೆ ಕುರಿತು

128(367) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಗಾಜನೂರು ಬಳಿ ತುಂಗಾ ಮೇಲ್ದಂಡೆ ಯೋಜನೆ ಸಲುವಾಗಿ ಅರಣ್ಯ ಇಲಾಖೆಗೆ ಸೇರಿದ 400 ಹೆಕ್ಟೇರ್ ಭೂಮಿಯನ್ನು ವಶಪಡಿಸಲು ಕೇಂದ್ರ ಸರ್ಕಾರದ ಪರಿಸರ

ಇಲಾಖೆ ವತಿಯಿಂದ ಅನುಮತಿ ನಿರಾಕರಿಸಲಾಗಿದೆಯೇ? ಹಾಗಿದ್ದಲ್ಲಿ ಈ ಯೋಜನೆಯ ಬಗ್ಗೆ ಸರ್ಕಾರದ ಕ್ರಮ ಏನು ವಿವರ ತಿಳಿಸುವುದು;

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಶಿವಮೊಗ್ಗ ತಾ: ಗಾಜನೂರಿನ ಬಳಿ ನಿರ್ಮಿಸಲಾಗುತ್ತಿರುವ ತುಂಗಾ ಮೇಲ್ದಂಡೆ ಯೋಜನೆಗಾಗಿ 449.55 ಹೆ. ಅರಣ್ಯ ಪ್ರದೇಶವನ್ನು ನೀರಾವರಿ ಕಾರ್ಯಕ್ಕಾಗಿ ಬದಲೀಕರಣಗೊಳಿಸಲು ಕರ್ನಾಟಕ ಸರ್ಕಾರದ ಅರಣ್ಯ, ಪರಿಸರ ಹಾಗೂ ಜೀವಿ ಪರಿಸ್ಥಿತಿ ಶಾಸ್ತ್ರ ಇಲಾಖೆಯಿಂದ ಸಲ್ಲಿಸಲ್ಪಟ್ಟಿದ್ದ ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಇಲಾಖೆಯು ಕೆಲವು ಸ್ಪಷ್ಟೀಕರಣ ಕೋರಿದ್ದು ಸದ್ಯದಲ್ಲಿಯೇ ಸ್ಪಷ್ಟೀಕರಣರನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು.

ಸರ್ವೋಚ್ಚ ನ್ಯಾಯಾಲಯವು ಸಂರಕ್ಷಿತ ಅರಣ್ಯ ಪ್ರದೇಶದ ಬಿಡುಗಡೆಯ ಬಗ್ಗೆ ವಿಧಿಸಿರುವ ನಿಷೇಧವನ್ನು ತೆರವುಗೊಳಿಸುವ ಪ್ರಾರ್ಥನೆಯೊಂದಿಗೆ ಸರ್ವೋಚ್ಚ ನ್ಯಾಯಾಲದಯಲ್ಲಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಲಾಗಿದೆ. ಈ ನಿಟ್ಟಿನಲ್ಲಿ ಮುಂದುವರಿಸಲಾದ ಪ್ರಯತ್ನವಾಗಿ ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಇಲಾಖೆಯು ನಿಯೋಜಿಸಿದ್ದ ಇಂಡಿಯನ್ ಬೋರ್ಡ್ ಆಫ್ ವೈಲ್ಡ್ ಲೈಫ್‌ನ ಸದಸ್ಯರು ಸ್ಥಳ ಪರಿಶೀಲನೆಯನ್ನು ದಿ: 25-4-2002 ರಂದು ಕೈಗೊಂಡಿದ್ದು ವರದಿಯನ್ನು ನಿರೀಕ್ಷಿಸಲಾಗಿದೆ. ಈ ವರದಿಯು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾಗಿರುವ ಮಧ್ಯಂತರ ಅರ್ಜಿಗೆ ಕುರಿತಾಗಿ ಜುಲೈ 2002ರ ಮೊದಲನೆ ಪಾಕ್ಷಿಕದಲ್ಲಿ ಬರಬಹುದಾದ ವಿಚಾರಣೆಗೆ ಪೂರಕವಾಗಿರುತ್ತದೆ.

ಅರಣ್ಯ (ಕಾಡು) ಉತ್ಪತ್ತಿಗಳನ್ನು ನೇರವಾಗಿ ಖರೀದಿಸುವ ವಿಚಾರ

129(159) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ಊರಿನಲ್ಲಿ ಅರಣ್ಯ (ಕಾಡು) ಉತ್ಪತ್ತಿಗಳನ್ನು ಲ್ಯಾಂಪ್ ಸೊಸೈಟಿ ಮೂಲಕ ಖರೀದಿಸಲಾಗುತ್ತಿರುವುದು ನಿಜವೇ;

ಆ) ಈ ಉತ್ಪನ್ನಗಳನ್ನು ಫಲಾನುಭವಿಗಳಿಂದ ಖರೀದಿಸದೇ ಮಧ್ಯವರ್ತಿಗಳಿಂದ ಖರೀದಿಸುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಇ) ಗಿರಿಜನ ಫಲಾನುಭವಿಗಳಿಂದ ಮಧ್ಯವರ್ತಿಗಳು ಅತ್ಯಲ್ಪ ಪ್ರಮಾಣದ ಹಣ ಪಾವತಿ ಮಾಡಿ ಖರೀದಿಸಿ, ಹೆಚ್ಚಿನ ಹಣಕ್ಕೆ ಸೊಸೈಟಿಗೆ ನೀಡುತ್ತಿದ್ದು ಈ ಗಿರಿಜನರಿಗೆ ಸರಿಯಾದ ಬೆಲೆ ಸಿಗದಿರುವುದರಿಂದ ತೊಂದರೆಯಾಗಿದ್ದು ನೇರವಾಗಿ ಖರೀದಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು):

ಅ) ಹೌದು.

ಆ) ಇಲ್ಲ.